"ಮಧುರ ಮಕ್ಕಳೇ - ತಂದೆಯ ಮಡಿಲಿಗೆ ಬಂದಾಗ ಈ ಪ್ರಪಂಚವು ಸಮಾಪ್ತಿಯಾಗುತ್ತದೆ, ನಿಮ್ಮದು ಮತ್ತೊಂದು ಜನ್ಮ ಹೊಸ ಪ್ರಪಂಚದಲ್ಲಿ ಆಗುತ್ತದೆ ಇದಕ್ಕೋಸ್ಕರ ಗಾದೆಯಿದೆ - ತಾವು ಸತ್ತರೆ ಇಡೀ ಜಗತ್ತೆ ಸತ್ತಂತೆ"

ಪ್ರಶ್ನೆ: ಯಾವ ಪದ್ಧತಿಯ ಆಧಾರದ ಮೇಲೆ ತಂದೆಯ ಅವತರಣೆಯನ್ನು ಸಿದ್ಧ ಮಾಡಲು ಸಾಧ್ಯ?

ಉತ್ತರ: ಭಾರತದಲ್ಲಿ ಪ್ರತೀವರ್ಷ ಪಿತೃಪಕ್ಷ ಶ್ರಾದ್ಧವನ್ನು ಮಾಡುವ ಪದ್ಧತಿ ಬಂದಿದೆ. ಬ್ರಾಹ್ಮಣರಲ್ಲಿ ಆತ್ಮವನ್ನು ಕರೆಸುತ್ತಾರೆ ನಂತರ ಅವರ ಜೊತೆ ಮಾತನಾಡುತ್ತಾರೆ ನಂತರ ಅವರ ಆಸೆಯನ್ನು ಕೇಳುತ್ತಾರೆ. ಈಗ ಶರೀರವಂತೂ ಬರುವುದಿಲ್ಲ. ಆತ್ಮವೇ ಬರುತ್ತದೆ ಇದೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ಹೇಗೆ ಆತ್ಮ ಪ್ರವೇಶ ಮಾಡುತ್ತದೆಯೋ ಹಾಗೆಯೇ ಪರಮಾತ್ಮನ ಅವತರಣೆಯಾಗುತ್ತದೆ. ಇದನ್ನು ನೀವು ಮಕ್ಕಳೇ ಸಿದ್ಧ ಮಾಡಿ ತೋರಿಸಬಹುದು.

ಗೀತೆ: ಸತ್ತರೂ ನಿಮ್ಮ ಮಡಿಲಿನಲ್ಲಿಯೇ, ಬದುಕಿದ್ದರೂ ನಿಮ್ಮ ಮಡಿಲಿನಲ್ಲಿಯೇ.................

ಓಂ ಶಾಂತಿ. ಈ ಗಾಯನವು ಈ ಸಮಯದ್ದಾಗಿದೆ, ಇದು ಭಕ್ತಿಮಾರ್ಗದಲ್ಲಿ ನಡೆಯುತ್ತಾ ಬರುತ್ತದೆ. ಈಸಮಯದಲ್ಲಿ ನೀವು ತಂದೆಯ ಬಳಿ ಬದುಕಿದ್ದಾಗ ಸಾಯುತ್ತೀರಿ ಆಗ ಇಡೀ ಪ್ರಪಂಚವು ವಿನಾಶವಾಗುತ್ತದೆ. ಅಜ್ಞಾನಕಾಲದಲ್ಲಿ ಮನುಷ್ಯರು ಸತ್ತಾಗ ಈ ಪ್ರಪಂಚದಲ್ಲಿ ಜನ್ಮವನ್ನು ತೆಗೆದುಕೊಳ್ಳುತ್ತಾರೆ. ನೀವು ಸತ್ತರೆ ಈ ಪ್ರಪಂಚವು ವಿನಾಶವಾಗುತ್ತದೆ. ನಾವು ಹೊಸಪ್ರಪಂಚದಲ್ಲಿ ಬರುತ್ತೇವೆ ಎನ್ನುವುದು ನಿಮಗೆ ತಿಳಿದಿದೆ. ಇದುಕೇವಲ ನೀವು ಬ್ರಾಹ್ಮಣರೇ ತಿಳಿದುಕೊಂಡಿದ್ದೀರಿ. ಈಶ್ವರನ ಮಗುವಾಗುವುದರಿಂದ ನಮಗೆ ಸತ್ಯಯುಗದ ಜನ್ಮಸಿದ್ಧ ಅಧಿಕಾರವು ಸಿಗುತ್ತದೆ. ಸ್ವರ್ಗದ ರಾಜ್ಯಪದವಿಯು ಸಿಗುತ್ತದೆ ನರಕವು ವಿನಾಶವಾಗುತ್ತದೆ. ಇದರಲ್ಲಿ ಯಾವುದೇ ಪರಿಶ್ರಮವಿಲ್ಲ ಕೇವಲ ತಂದೆಯನ್ನು ನೆನಪು ಮಾಡಬೇಕು. ಮನುಷ್ಯರು ಸಾಯುವಾಗ ರಾಮ-ರಾಮ ಎಂದು ಹೇಳಿ ಎಂದು ಹೇಳುತ್ತಾರೆ. ಅಂತಿಮದಲ್ಲಿ ಶರೀರ ತೆಗೆಯುವ ಸಮಯದಲ್ಲಿ ರಾಮನಾಮ ಸತ್ಯವಾಗಿದೆ ಎಂದು ಹೇಳುತ್ತಾರೆ. ಇದು ಭಗವಂತನಿಗೇ ಹೇಳುವುದಾಗಿದೆ. ಇದು ರಾಮನಾಮ ಸತ್ಯವಾಗಿದೆ ಅರ್ಥಾತ್ ಪರಮಪಿತ ಪರಮಾತ್ಮ ಯಾರು ಸತ್ಯವಾಗಿದ್ದಾರೋ ಅವರ ಹೆಸರನ್ನೇ ಸ್ಮರಿಸಬೇಕು. ಮಾಲೆಯಲ್ಲಿ ರಾಮ-ರಾಮ ಎಂದು ಹೇಳಿ ಸ್ಮರಿಸುತ್ತಾರೆ ಈ ರಾಮನ ಧ್ವನಿಯು ಹೇಗೆ ಮೃದಂಗ ಬಾರಿಸುವ ರೀತಿಯಿರುತ್ತದೆ ಆದರೆ ಇಲ್ಲಿ ಯಾವುದೇ ಶಬ್ದವನ್ನು ಮಾಡಬಾರದು. ಕೇವಲ ನನ್ನೊಬ್ಬನನ್ನೇ ನೆನಪು ಮಾಡಬೇಕೆಂದು ತಂದೆಯು ಹೇಳುತ್ತಾರೆ. ಬದುಕಿದ್ದರೂ ಈಶ್ವರನ ಮಡಿಲಿನಲ್ಲಿ ಇರುವುದರಿಂದ ಈ ದುಃಖ ರೂಪಿ ಪ್ರಪಂಚವು ವಿನಾಶವಾಗುತ್ತದೆ ಎಂದು ನಿಮಗೆ ತಿಳಿದಿದೆ. ಬಾಬಾ, ನಾವು ನಿಮ್ಮ ಕೊರಳಿನ ಹಾರವಾಗುತ್ತೇವೆ, ರುದ್ರಮಾಲೆಯಲ್ಲಿ ಮಣಿಗಳಾಗುವುದಕ್ಕೋಸ್ಕರ ಈ ರುದ್ರಜ್ಞಾನ ಯಜ್ಞದಲ್ಲಿ ಕುಳಿತಿದ್ದೀರಿ. ನಾವು ಈಶ್ವರ ತಂದೆಯ ಕೊರಳಿನ ಮಾಲೆಯ ಮಣಿಗಳಾಗುತ್ತೇವೆಂದು ಬೇರೆ ಯಾವುದೇ ಸತ್ಸಂಗದಲ್ಲಿ ಹೇಳುವುದಿಲ್ಲ. ತಂದೆಯಿಂದ ಆಸ್ತಿಯು ಅವಶ್ಯವಾಗಿ ಸಿಗುತ್ತದೆ. ತಂದೆಯೆಂದು ಯಾರು ಹೇಳುತ್ತಾರೆ? ಆತ್ಮ, ಆತ್ಮದಲ್ಲಿಯೇ ಬುದ್ಧಿಯಿದೆಯಲ್ಲವೆ. ಬುದ್ಧಿಯು ತಿಳಿದುಕೊಳ್ಳುತ್ತದೆ ನಂತರ ಹೇಳುತ್ತದೆ. ಮೊದಲು ಸಂಕಲ್ಪ ಬರುತ್ತದೆ ನಂತರ ಕರ್ಮೇಂದ್ರಿಯಗಳಿಂದ ಮಾಡುತ್ತದೆ. ಅವಶ್ಯವಾಗಿ ನಾನು ತಂದೆಯ ಮಗುವಾಗಿದ್ದೇನೆ. ತಂದೆಯ ಮಗುವಾಗಿಯೇ ಇರುತ್ತೇನೆ. ಈ ಅಂತಿಮಜನ್ಮದಲ್ಲಿ ಗಾಡ್ಫಾದರ್ ಎಂದು ಹೇಳುತ್ತೀರಲ್ಲವೆ ನಂತರ ಕೇಳಿ - ನಿಮ್ಮಲ್ಲಿ ಗಾಡ್ಫಾದರ್ನ ಜ್ಞಾನವಿದೆಯೇ? ಅಂದಾಗ ಭಗವಂತ ಸರ್ವವ್ಯಾಪಿ ಎಂದು ಹೇಳುತ್ತಾರೆ. ಹೇಳಿ - ನಿಮ್ಮ ಆತ್ಮವು ಹೇಳುತ್ತದೆ ಪರಮಪಿತ ಅಂದಾಗ ತಂದೆಯು ಸರ್ವವ್ಯಾಪಿ ಹೇಗಾಗುತ್ತಾರೆ? ಮಕ್ಕಳಲ್ಲಿ ತಂದೆಯು ಬರುತ್ತಾರೆಯೇ? ತಂದೆಯನ್ನು ಸರ್ವವ್ಯಾಪಿ ಎಂದು ಹೇಳುವುದು ತಪ್ಪಾಗಿದೆ. ಈ ಮಾತನ್ನು ಬಹಳ ಚೆನ್ನಾಗಿ ತಿಳಿದುಕೊಂಡು ನಂತರ ತಿಳಿಸಬೇಕಾಗಿದೆ.

ರುದ್ರಜ್ಞಾನ ಯಜ್ಞವು ಪ್ರಸಿದ್ಧವಾಗಿದೆ, ರುದ್ರ ನಿರಾಕಾರನಾಗಿದ್ದಾರೆ, ಕೃಷ್ಣ ಸಾಕಾರವಾಗಿದ್ದಾನೆ. ಕಡೆಗೆ ಭಗವಂತನೆಂದು ಯಾರಿಗೆ ಹೇಳುವುದು? ಕೃಷ್ಣನಿಗಂತೂ ಹೇಳಲು ಸಾಧ್ಯವಿಲ್ಲಾ. ಮನುಷ್ಯರಂತೂ ಬಹಳ ಮುಗ್ಧರಾಗಿರುತ್ತಾರೆ. ನಂತರ ಹೇಳಿಬಿಡುತ್ತಾರೆ- ಭಗವಂತ ಸರ್ವವ್ಯಾಪಿಯಾಗಿದ್ದಾನೆ ಎಂದು. ತಂದೆಯು ತನ್ನ ಮನೆಯಲ್ಲಿಯೇ ಇರುತ್ತಾರೆ. ಮತ್ತೆಲ್ಲಿಇರುತ್ತಾರೆ?ಈಗ ನಾನು ಈ ಬೇಹದ್ದಿನ ಮನೆಯಲ್ಲಿ ಬಂದಿದ್ದೇನೆ. ಇಲ್ಲಿ ವಿರಾಜಮಾನನಾಗಿದ್ದೇನೆ. ನಾನು ಇವರಲ್ಲಿ ಪ್ರವೇಶ ಮಾಡುತ್ತೇನೆಂದು ಹೇಳುತ್ತಾರೆ. ಹೇಗೆ ಬ್ರಾಹ್ಮಣರಲ್ಲಿ ಪಿತೃಗಳನ್ನು ಕರೆಸುತ್ತಾರೆ. ತಿಳಿಯಿರಿ, ಯಾರದೋ ಪಿತೃಗಳಿಗೆ ತಿನ್ನಿಸುವಾಗ ಅವರ ಆತ್ಮ ಹೇಳುತ್ತೆ ನಾನೇ ಇವರಲ್ಲಿ ಬಂದಿದ್ದೇನೆ. ನಾನೇ ಇವರಲ್ಲಿ ಪ್ರವೇಶ ಮಾಡಿದ್ದೇನೆ, ಏನಾದರೂ ಕೇಳುವುದಿದ್ದರೆ ಕೇಳಿ ಎಂದು. ಮೊದಲು ಶ್ರಾದ್ಧ ಮಾಡಿ ಕರೆಸುವುದು ಬಹಳಷ್ಟು ಸಂಪ್ರದಾಯವಿತ್ತು. ಪಿತೃಗಳ ಆತ್ಮವಾಗಿದೆಯಲ್ಲವೆ. ಪಿತೃಗಳಿಗೆ ಅರ್ಥಾತ್ ಆತ್ಮಕ್ಕೆ ತಿನ್ನಿಸಲಾಗುತ್ತದೆ. ಇಂದು ನಮ್ಮ ತಾತನ ಶ್ರಾದ್ಧವಾಗಿದೆ, ಇಂದು ಇಂತಹವರ ಶ್ರಾದ್ಧವಾಗಿದೆ ಎಂದು ಹೇಳುತ್ತಾರೆ ಅಂದಾಗ ಆತ್ಮವನ್ನು ಕರೆಸಲಾಗುತ್ತದೆ, ತಿನ್ನಿಸಲಾಗುತ್ತದೆ. ತಿಳಿದುಕೊಳ್ಳಿ - ಯಾರಿಗಾದರೂ ಸ್ತ್ರೀಯ ಜೊತೆ ಪ್ರೀತಿ ಇದ್ದರೆ ಅವರ

ಆತ್ಮವನ್ನು ಕರೆಸುತ್ತಾರೆ. ನಾನು ವಜ್ರದ ಹಾರವನ್ನು ಹಾಕುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದೇನೆಂದು ಹೇಳುತ್ತಾರೆ ಆಗ ಬ್ರಾಹ್ಮಣರನ್ನು ಕರೆಸಿ ಅವರಿಗೆ ವಜ್ರದ ಹಾರವನ್ನು ಹಾಕುತ್ತಾರೆ. ಆತ್ಮವನ್ನು ಕರೆಸುತ್ತಾರೆ ಶರೀರವಂತೂ ಬರುವುದಿಲ್ಲ. ಈ ಸಂಪ್ರದಾಯವು ಭಾರತದಲ್ಲಿಯೇ ಇದೆ. ಹೇಗೆ ನೀವು ಸೂಕ್ಷ್ಮವತನದಲ್ಲಿ ಹೋಗುತ್ತೀರಿ, ಯಾರಾದರೂ ಶರೀರವನ್ನು ಬಿಟ್ಟರೆ ಅವರಿಗೆ ಭೋಗವನ್ನು ಇಡಲಾಗುತ್ತದೆ. ಸೂಕ್ಷ್ಮವತನದಲ್ಲಿ ಆ ಆತ್ಮವು ಬರುತ್ತದೆ. ಇದು ಸಂಪೂರ್ಣ ಹೊಸದಾಗಿದೆ. ಎಲ್ಲಿಯತನಕ ಚೆನ್ನಾಗಿ ತಿಳಿದುಕೊಳ್ಳುವುದಿಲ್ಲವೋ ಅಲ್ಲಿಯತನಕ ಮನುಷ್ಯರಿಗೆ ಇವರು ಏನು ಮಾಡುತ್ತಿದ್ದಾರೆಂದು ಸಂಶಯ ಬರುತ್ತದೆ. ಬ್ರಾಹ್ಮಣರ ರೀತಿ ಸಂಪ್ರದಾಯಗಳು ಹೇಗಿದೆ ಎಂದು ನೋಡಿರಿ. ಎಲ್ಲಾ ಮಂದಿರಗಳಲ್ಲಿ ಭೋಗವನ್ನಿಡುತ್ತಾರೆ. ಪಿತೃಗಳಿಗೆ ಭೋಗವನ್ನಿಡುತ್ತಾರೆ. ಗುರುನಾನಕ್ನ ಆತ್ಮಕ್ಕೂ ಭೋಗವನ್ನಿಡುತ್ತಾರೆ ಆದರೆ ಈಗ ಅವರು ಎಲ್ಲಿದ್ದಾರೆ? ಇದನ್ನು ತಿಳಿದುಕೊಂಡಿಲ್ಲ. ಯಾರೆಲ್ಲಾ ಧರ್ಮಸ್ಥಾಪಕರಿದ್ದಾರೆಯೋ ಅವರೆಲ್ಲಾ ಇಲ್ಲಿಯೇ ಇದ್ದಾರೆಂದು ತಿಳಿದಿಲ್ಲ. ಹೇಗೆ ತಂದೆಯು ಬ್ರಾಹ್ಮಣಧರ್ಮವನ್ನು ಸ್ಥಾಪನೆ ಮಾಡುತ್ತಾರೆ ಅವರು ಪತಿತಪಾವನ ಆಗಿದ್ದಾರೆ. ಪಾವನ ಆತ್ಮವೇ ಬಂದು ಧರ್ಮ ಸ್ಥಾಪನೆ ಮಾಡುತ್ತದೆ ಆದರೆ ಸತೋಪ್ರಧಾನ ಆತ್ಮವು ನಂತರ ಸತೋ, ರಜೋ, ತಮೋದಲ್ಲಿ ಬರಬೇಕು. ಈ ಸಮಯದಲ್ಲಿ ಎಲ್ಲಾ ಆತ್ಮಗಳು ಸ್ಮಶಾನವಾಸಿಗಳಾಗಿದ್ದಾರೆ. ತಂದೆಯು ಪತಿತಪಾವನನಾಗಿದ್ದಾರೆ, ಅವರು ಎಂದೂ ಸ್ಮಶಾನವಾಸಿಯಾಗುವುದಿಲ್ಲ. ಮನುಷ್ಯರಿಗೆ ಪತಿತ-ಪಾವನ ಎಂದು ಹೇಳಲಾಗುವುದಿಲ್ಲ. ಪತಿತ-ಪಾವನ ಅಂದರೆ ಇಡೀ ಪ್ರಪಂಚವನ್ನು ಪಾವನ ಮಾಡುತ್ತಾರೆ. ಪತಿತ ಪ್ರಪಂಚವನ್ನು ಪಾವನ ಮಾಡುವವರು ಒಬ್ಬ ತಂದೆಯ ವಿನಃ ಬೇರೆ ಯಾರೂ ಇಲ್ಲ. ಅವರೆಲ್ಲರೂ ತಮ್ಮ-ತಮ್ಮ ಧರ್ಮವನ್ನು ಸ್ಥಾಪನೆ ಮಾಡುತ್ತಾರೆ. ಕ್ರಿಶ್ಚಿಯನ್ ಧರ್ಮದ ಇಡೀ ವಂಶಾವಳಿಯು ಪರಮಧಾಮದಲ್ಲಿ ಇದೆ. ಮೊದಲು ಕ್ರಿಸ್ತನು ಬರುತ್ತಾನೆ ನಂತರ ಅವನ ಹಿಂದೆ ಎಲ್ಲರೂ ಬರುತ್ತಾರೆ ವೃದ್ಧಿ ಪಡೆಯುತ್ತದೆ ಆದರೆ ಅವರು ಯಾರನ್ನೂ ಪಾವನ ಮಾಡುವುದಿಲ್ಲ. ನಂಬರ್ವಾರಾಗಿ ಅವರ ಸಂಖ್ಯೆಯು ಬರುತ್ತಿರುತ್ತದೆ. ಪತಿತ-ಪಾವನನಂತೂ ಈ ಸಮಯದಲ್ಲಿ ಬರಬೇಕಾಗಿದೆ. ಯಾವಾಗ ಎಲ್ಲರೂ ಸ್ಮಶಾನವಾಸಿಗಳಾಗುತ್ತಾರೆಯೋ ಆಗ ಎಲ್ಲರನ್ನೂ ಪಾವನ ಮಾಡುವಂತಹ ಒಬ್ಬ ತಂದೆಯು ಬರಬೇಕಾಗುತ್ತದೆ.

ಅವಶ್ಯವಾಗಿ ಈ ಸಮಯದಲ್ಲಿ ಜಡಿ-ಜಡೀಭೂತ ಸ್ಥಿತಿಯಲ್ಲಿದೆ ಎಂದು ನಿಮಗೆ ಗೊತ್ತಿದೆ. ಆಲದಮರದ ಉದಾಹರಣೆಯನ್ನು ಕೊಡುತ್ತಾರೆ. ಬಹಳ ದೊಡ್ಡ ವೃಕ್ಷವಾಗಿದೆ ಆದರೆ ಅದರ ಬುನಾದಿ ಟೊಳ್ಳಾಗಿದೆ ಬಾಕಿ ರೆಂಬೆ-ಕೊಂಬೆಗಳು ನಿಂತಿವೆ. ಇದೂ ಸಹ ವೃಕ್ಷವಾಗಿದೆ. ದೇವಿ-ದೇವತಾ ಧರ್ಮದ ಬುನಾದಿಯು ಒಂದೇ ಸಲ ತುಂಡಾಗಿದೆ ಬಾಕಿ ಎಲ್ಲವೂ ಇದೆ. ಬೀಜವಿದ್ದರೆ ಪುನಃ ಸ್ಥಾಪನೆ ಮಾಡಬಹುದಲ್ಲವೆ. ನಾನು ಪುನಃ ಬಂದು ಸ್ಥಾಪನೆಯನ್ನು ಮಾಡಿಸುತ್ತೇನೆಂದು ತಂದೆಯು ಹೇಳುತ್ತಾರೆ. ಬ್ರಹ್ಮನ ಮುಖಾಂತರ ಸ್ಥಾಪನೆ, ಶಂಕರನ ಮುಖಾಂತರ ವಿನಾಶ ಅವಶ್ಯವಾಗಿ ಅನೇಕ ಧರ್ಮಗಳ ವಿನಾಶವಾಗುತ್ತದೆ. ಮಹಾಭಾರತದ ಯುದ್ಧದ ಸಮಯದಲ್ಲಿ ಯಾರು ರಾಜಯೋಗವನ್ನು ಕಲಿಯುತ್ತಾರೆ ಅವರದು ಪುನಃ ರಾಜಧಾನಿಯು ಸ್ಥಾಪನೆಯಾಗುತ್ತದೆ. ಈಗ ನಾವು ತಂದೆಯ ಬಳಿಗೆ ಹೋಗುತ್ತೇವೆ ನಂತರ ಹೊಸಪ್ರಪಂಚದಲ್ಲಿ ಬರುತ್ತೇವೆಂದು ನಿಮಗೆ ತಿಳಿದಿದೆ ನಂತರ ವೃಕ್ಷವೂ ವೃದ್ಧಿಪಡೆಯುತ್ತದೆ. ಯಾವ ದೇವಿ-ದೇವತಾ ಧರ್ಮವಿತ್ತೋ ಅದು ಪ್ರಾಯಃಲೋಪವಾಗುತ್ತದೆ. ನಾನು ಪುನಃ ಬಂದು ಆದಿಸನಾತನ ದೇವೀ-ದೇವತಾಧರ್ಮವನ್ನು ಸ್ಥಾಪನೆ ಮಾಡುತ್ತೇನೆಂದು ತಂದೆಯು ಹೇಳುತ್ತಾರೆ. ಯಾವ ಭಾರತ ಶ್ರೇಷ್ಠಾತಿಶ್ರೇಷ್ಠವಾಗಿತ್ತೋ ಅದಕ್ಕೆ ಈಗ ಗ್ರಹಣ ಹಿಡಿದಿದೆ. ಕಾಮಚಿತೆಯ ಮೇಲೆ ಕುಳಿತುಕೊಂಡಿರುವುದರಿಂದ ಈ ಸಮಯದಲ್ಲಿ ನಿಮ್ಮ ಆತ್ಮವು ಕಪ್ಪಾಗಿದೆ. ಈಗ ಪುನಃ ನೀವು ಜ್ಞಾನಚಿತೆಯ ಮೇಲೆ ಕುಳಿತುಕೊಂಡು ಸುಂದರರಾಗುತ್ತೀರಿ. ಪತಿತರಿಂದ ಸುಂದರರನ್ನಾಗಿ ಮಾಡುವವರು ಪರಮಪಿತ ಪರಮಾತ್ಮನಾಗಿದ್ದಾರೆ. ಅವರ ಶ್ರೀಮತವೂ ಸಿಗುತ್ತಿದೆ. ಪರಮಪಿತ ಪರಮ ಆತ್ಮ ಸದಾ ಪವಿತ್ರ ಸುಂದರವಾಗಿರುತ್ತಾರೆ. ಆತ್ಮದಲ್ಲಿಯೇ ತುಕ್ಕು ಹಿಡಿಯುತ್ತದೆ (ಚಿನ್ನದ ಉದಾಹರಣೆ) ಈ ಹಳೆಯ ಪ್ರಪಂಚದ ವಿನಾಶವಾಗುತ್ತದೆ. ಇಲ್ಲಿ ಎಲ್ಲರಿಗೂ ಮೃತ್ಯುವಿದೆ ಎಂದು ಈಗ ನಿಮಗೆ ಗೊತ್ತಿದೆ ನಂತರ ನಿಮಗೆ ರಾಮ-ರಾಮ ಎಂದು ಹೇಳಿ ಎನ್ನುವವರು ಯಾರೂ ಇರುವುದಿಲ್ಲ. ಈಗ ನೋಡಿ - ನೆಹರು ಸತ್ತಾಗ ಅವರ ಬೂದಿಯನ್ನು ಎಲ್ಲಾ ನದಿಗಳಲ್ಲಿಯೂ ಹಾಕಿದರು. ಒಳ್ಳೆಯದು ಗೊಬ್ಬರ ಸಿಕ್ಕಿತು. ವೃಕ್ಷದಲ್ಲಿ ಹುಳುಗಳು ಬಿದ್ದಾಗ ಅದಕ್ಕೆ ಬೂದಿಯನ್ನು ಹಾಕುತ್ತಾರೆ. ಈಗ ಇಡೀ ಪೃಥ್ವಿಗೆ ಎಷ್ಟೊಂದು ಬೂದಿ ಸಿಗುತ್ತದೆ. ದೊಡ್ಡ-ದೊಡ್ಡ ಸನ್ಯಾಸಿಗಳು, ಮಹಾತ್ಮರು ಸತ್ತಾಗ ಅವರ ಬೂದಿಯನ್ನು ಈ ರೀತಿ ಹಾಕುವುದಿಲ್ಲ. ಎಲ್ಲದಕ್ಕಿಂತ ಉತ್ತಮರು ಸನ್ಯಾಸಿಗಳಾಗಿದ್ದಾರೆ. ಈಗ ಎಷ್ಟೊಂದು ಜನ ಸಾಯುತ್ತಾರೆ. ಎಷ್ಟೊಂದು ಗೊಬ್ಬರ ಸಿಗುತ್ತದೆ ಅಂದಾಗ ಸೃಷ್ಟಿ ಫಸ್ಟ್ ಕ್ಲಾಸ್ ಆಗಿರುವಂತಹ ದವಸ ಧಾನ್ಯಗಳು ಕೊಡುತ್ತವೆ. ಸತ್ಯಯುಗದಲ್ಲಿ ಎಲ್ಲವೂ ಹೆಚ್ಚು ಹಸಿರಾಗಿರುತ್ತದೆ. ಸೃಷ್ಟಿಯನ್ನು ಹೊಸದಾಗಿ ಮಾಡುವುದರಲ್ಲಿ ಸಮಯ ಹಿಡಿಸುತ್ತದೆ. ನೀವು ಸೂಕ್ಷ್ಮವತನಕ್ಕೆ ಹೋಗುತ್ತೀರಿ ಅಲ್ಲಿ ಎಷ್ಟೊಂದು ದೊಡ್ಡ-ದೊಡ್ಡ ಹಣ್ಣುಗಳನ್ನು ತೋರಿಸುತ್ತಾರೆ. ಶೂಬಿರಸವನ್ನು ಕುಡಿಸುತ್ತಾರೆ. ಎಷ್ಟೊಂದು ಗೊಬ್ಬರ ಸಿಗುತ್ತದೆ ಎಂದು ವಿಚಾರ ಮಾಡಿರಿ. ಅದೂ ಮುಖ್ಯವಾಗಿ ಭಾರತಕ್ಕೆ ಸಿಗುತ್ತದೆ. ಅಲ್ಲಿ ಎಷ್ಟು ಒಳ್ಳೊಳ್ಳೆಯ ವಸ್ತುಗಳು ಹೊಸಪ್ರಪಂಚಕ್ಕೋಸ್ಕರ ಸಿಗುತ್ತವೆ. ಇಡೀ ಪ್ರಪಂಚವು ಬೂದಿಯಾಗಿ ಹೊಸದಾಗುತ್ತದೆ. ಸೂಕ್ಷ್ಮವತನದಲ್ಲಿ ಮಕ್ಕಳಿಗೆ ಸಾಕ್ಷಾತ್ಕಾರವು ಆಗಿದೆ ಶೂಬಿರಸವನ್ನು ಕುಡಿದು ಬರುತ್ತಾರೆ. ರಾಜಕುಮಾರ-ರಾಜಕುಮಾರಿಯರು ಉದ್ಯಾನವನದಿಂದ ಹಣ್ಣನ್ನು ತರುತ್ತಿದ್ದರು ಈಗ ಸೂಕ್ಷ್ಮವತನದಲ್ಲಿ ತೋಟವಿರಲು ಸಾಧ್ಯವಿಲ್ಲ. ಅವಶ್ಯವಾಗಿ ವೈಕುಂಠದಲ್ಲಿರುತ್ತದೆ. ಒಬ್ಬೊಬ್ಬರಿಗೂ ಸಾಕ್ಷಾತ್ಕಾರ ಮಾಡಿಸುವುದಿಲ್ಲ. ಯಾರು ನಿಮಿತ್ತರಾಗಿರುತ್ತಾರೆಯೋ ಅವರಿಗೆ ಸಾಕ್ಷಾತ್ಕಾರ ಮಾಡಿಸುತ್ತಾರೆ. ಒಂದುವೇಳೆ ನೆನಪಿನಲ್ಲಿದ್ದರೆ ತಂದೆಯ ಮಕ್ಕಳಾಗಿದ್ದಾಗ ಅಂತಿಮದಲ್ಲಿ ನಿಮಗೆ ಸಾಕ್ಷಾತ್ಕಾರವಾಗುತ್ತದೆ ಎಂದು ಹೇಳುತ್ತಾರೆ. ಇದು ಮೊದಲು ಗೋಶಾಲೆಯಾಗಿತ್ತು, ಭಟ್ಟಿಯಿಂದ

ಬಹಳಷ್ಟು ಜನ ಬಂದರು.

ಅನ್ಯರಿಗೆ ಕೇವಲ ಪುಸ್ತಕಗಳನ್ನು ಕೊಡುವುದರಿಂದ ಅವರು ತಿಳಿದುಕೊಳ್ಳುವುದಿಲ್ಲವೆಂದು ನೀವು ಮಕ್ಕಳಿಗೆ ತಿಳಿಸಲಾಗಿದೆ. ತಿಳಿಸುವಂತಹ ಶಿಕ್ಷಕರು ಅವಶ್ಯವಾಗಿ ಬೇಕು. ಶಿಕ್ಷಕರು ಸೆಕೆಂಡಿನಲ್ಲಿ ಇವರು ನಿಮ್ಮ ತಂದೆಯಾಗಿದ್ದಾರೆ, ಇವರು ನಿಮ್ಮ ತಾತನಾಗಿದ್ದಾರೆ, ಇವರು ನಿಮ್ಮ ಬೇಹದ್ದಿನ ಸ್ವರ್ಗದ ರಚಯಿತನಾಗಿದ್ದಾರೆಂದು ತಿಳಿಸುತ್ತಾರೆ. ಕೇವಲ ಯಾರಿಗಾದರೂ ಪುಸ್ತಕವನ್ನು ಕೊಟ್ಟರೆ ನೋಡಿ ಎಸಿಯುತ್ತಾರೆ. ಏನನ್ನೂ ತಿಳಿದುಕೊಳ್ಳುವುದಿಲ್ಲ. ತಂದೆಯು ಬಂದಿದ್ದಾರೆಂದು ಅವಶ್ಯವಾಗಿ ತಿಳಿಸಬೇಕು. ಈ ಡಂಗೂರ ಬಾರಿಸುವುದು ನಿಮ್ಮ ಕರ್ತವ್ಯವಾಗಿದೆ. ಅವಶ್ಯವಾಗಿ ಯಾದವರು, ಕೌರವರಿದ್ದಾರೆ. ಮಹಾಭಾರತದ ಯುದ್ಧವು ಎದುರಿಗೆ ನಿಂತಿದೆ. ಅವಶ್ಯವಾಗಿ ರಾಜಯೋಗವನ್ನು ಕಲಿಸುವಂತಹವರು ಇದ್ದಾರೆ. ಸ್ವರ್ಗದ ಸ್ಥಾಪನೆಯು ಆಗುತ್ತದೆ. ಒಂದುಧರ್ಮ ಸ್ಥಾಪನೆ ಅನೇಕ ಧರ್ಮಗಳ ವಿನಾಶ ಆಗುತ್ತದೆ. ನಾವು ನರನಿಂದ ನಾರಾಯಣ, ನಾರಿಯಿಂದ ಲಕ್ಷ್ಮಿ ಆಗುತ್ತೇವೆ ಎಂದು ನಿಮಗೆ ತಿಳಿದಿದೆ. ಇದು ನಮ್ಮ ಗುರಿ-ಉದ್ದೇಶ ಆಗಿದೆ. ಮನುಷ್ಯರಿಂದ ದೇವತೆಗಳಾಗಲು ಯಾವುದೇ ಯುದ್ಧವನ್ನು ಮಾಡುವುದಿಲ್ಲ. ದೇವತೆಗಳಿಗೆ ಕೇವಲ ಸೂರ್ಯವಂಶಿಗಳೆಂದು ಹೇಳಲಾಗುತ್ತದೆ. ಚಂದ್ರವಂಶಿಗಳಿಗೆ ಕ್ಷತ್ರಿಯರು ಎಂದು ಹೇಳಲಾಗುತ್ತದೆ. ಮೊದಲು ದೇವತೆಗಳಾಗಬೇಕಾಗಿದೆಯಲ್ಲವೆ. ಅನುತ್ತೀರ್ಣ ಆಗುವುದರಿಂದ ಕ್ಷತ್ರಿಯರಾಗುತ್ತೇವೆ. ಮಧುರಾತಿ ಮಧುರ ಅಗಲಿ ಸಿಕ್ಕಿದ ಮಕ್ಕಳೆಂದು ತಂದೆ ಹೇಳುತ್ತಾರೆ. ಎಷ್ಟೊಂದು ಅಗಲಿ ಸಿಕ್ಕಿದ ಮಕ್ಕಳಿದ್ದಾರೆ ನೋಡಿ ಯಾರಾದರು ಮಕ್ಕಳು ಕಣ್ಮರೆ ಆಗಿ 6-8 ತಿಂಗಳ ನಂತರ ಎಷ್ಟೊಂದು ಪ್ರೀತಿಯಿಂದ ಬಂದು ಮಿಲನ ಮಾಡುತ್ತಾರೆ ಅಂದಾಗ ತಂದೆಗೆ ಎಷ್ಟೊಂದು ಆಶ್ಚರ್ಯವಾಗುತ್ತದೆ! ಮುದ್ದಾದ ಅಗಲಿ ಸಿಕ್ಕಿದ ಮಕ್ಕಳೇ, ನೀವು 5000 ವರ್ಷದ ನಂತರ ಬಂದು ಮಿಲನ ಮಾಡಿದ್ದೀರಿ ಎಂದು ಹೇಳುತ್ತಾರೆ. ಮುದ್ದಾದ ಮಕ್ಕಳೇ ನೀವು ದೂರವಾಗಿದ್ದೀರಿ, ಈಗ ಪುನಃ ಬಂದು ಬೇಹದ್ದಿನ ಆಸ್ತಿಯನ್ನು ತೆಗೆದುಕೊಳ್ಳಲು ಬಂದಿದ್ದೀರಿ. ದೇವತೆಗಳ ಪ್ರಪಂಚದ ರಾಜ್ಯವು ನಿಮಗೆ ತಂದೆ ಭಗವಂತನಿಂದ ಪಡೆಯುವ ಜನ್ಮಸಿದ್ಧ ಅಧಿಕಾರವಾಗಿದೆ. ತಂದೆಯೇ ನಮಗೆ ಬೇಹದ್ದಿನ ರಾಜ್ಯಪದವಿಯನ್ನು ಕೊಡಲು ಬಂದಿದ್ದಾರೆ. ಅವರು ಸ್ವರ್ಗದ ರಚೈತನಾಗಿದ್ದಾರೆ. ನೀವು ಮಕ್ಕಳಿಗೋಸ್ಕರ ಎಷ್ಟೊಂದು ದೊಡ್ಡ ಉಡುಗೊರೆಯನ್ನು ತಂದಿದ್ದೇನೆ ಎಂದು ಹೇಳುತ್ತಾರೆ ಆದರೆ ಅಷ್ಟು ಯೋಗ್ಯರಾಗಬೇಕಾಗಿದೆ, ಶ್ರೀಮತದಂತೆ ನಡೆಯಬೇಕಾಗಿದೆ. ಮಮ್ಮಾ-ಬಾಬಾ ಹೇಳಿದ ನಂತರ ಒಂದುವೇಳೆ ಮರೆತುಹೋದರೆ ಅಥವಾ ವಿಚ್ಛೇದನವನ್ನು ಕೊಟ್ಟರೆ ಕೊರಳಿನ ಹಾರವಾಗಲು ಸಾಧ್ಯವಿಲ್ಲ. ಮಕ್ಕಳನ್ನು ಎಷ್ಟೊಂದು ಪ್ರೀತಿ ಮಾಡುತ್ತಾರೆ. ತಂದೆಯು ಮಕ್ಕಳನ್ನು ತಲೆಯ ಮೇಲೆ ಇಟ್ಟುಕೊಳ್ಳುತ್ತಾರೆ. ಅಂದಾಗ ಬೇಹದ್ದಿನ ತಂದೆಗೆ ಎಷ್ಟೊಂದು ಮಕ್ಕಳಿದ್ದಾರೆ. ಮಕ್ಕಳನ್ನು ಎಷ್ಟೊಂದು ಶ್ರೇಷ್ಠರನ್ನಾಗಿ ಮಾಡಿ ತಲೆಯ ಮೇಲೆ ಕೂರಿಸಿಕೊಳ್ಳುತ್ತಾರೆ. ಯಾರು ಕಾಲಿಗೆ ಬೀಳುತ್ತಿದ್ದರೋ ಅವರನ್ನು ತಲೆಯ ಮೇಲೆ ಕೂರಿಸಿಕೊಳ್ಳುತ್ತಾರೆ ಅಂದಾಗ ಎಷ್ಟು ಖುಷಿ ಆಗಬೇಕು! ಮತ್ತೆ ಶ್ರೀಮತದಂತೆ ನಡೆಯಬೇಕು. ಒಬ್ಬರ ಶ್ರೀಮತದಂತೆ ನಡೆಯಬೇಕು. ನಮ್ಮ ಮನ್ಮತದಂತೆ ನಡೆದರೆ ಸತ್ತ ಹಾಗೆ. ಶ್ರೀಮತದಂತೆ ನಡೆದಾಗ ಶ್ರೇಷ್ಠಾತಿಶ್ರೇಷ್ಠ ಮನುಷ್ಯರು ಅರ್ಥಾತ್ ದೇವತೆಗಳಾಗುತ್ತೀರಿ. ಎಷ್ಟು ನಂಬರಿನಲ್ಲಿ ಪಾಸ್ ಆಗುತ್ತೀರಿ? ಎಂದು ಬಾಬಾ ಕೇಳುತ್ತಾರಲ್ಲವೇ. ಸೂರ್ಯವಂಶಿಗಳಾಗಿ ಎಂದು ತಂದೆಯು ಹೇಳುತ್ತಾರೆ ಅಂದಾಗ ಮಮ್ಮಾ-ಬಾಬಾರವರನ್ನು ಅನುಸರಣೆ ಮಾಡಬೇಕು. ತಮ್ಮ ಸಮಾನ ಸ್ವದರ್ಶನಚಕ್ರದಾರಿಗಳನ್ನಾಗಿ ಮಾಡಬೇಕು. ಶಿವಬಾಬಾನ ಎದುರಿಗೆ ಕರೆದುಕೊಂಡು ಬಂದಾಗ ಬಾಬಾ ಕೇಳುತ್ತಾರೆ - ಎಷ್ಟು ಜನರನ್ನು ತಮ್ಮ ಸಮಾನ ಮಾಡಿಕೊಂಡಿದ್ದೀರಿ? ಎಷ್ಟು ಸಂತೋಷದ ಮಾತು. ನೀವೇ ತಿಳಿದುಕೊಳ್ಳಬಲ್ಲಿರಿ, ಹೊಸಬರು ಯಾರೂ ಇದನ್ನು ತಿಳಿದುಕೊಳ್ಳುವುದಿಲ್ಲ. ಇದು ಮನುಷ್ಯರಿಂದ ದೇವತೆಗಳು ಆಗುವ ಕಾಲೇಜ್ ಆಗಿದೆ. ಕೆಲವರು 7 ದಿನಗಳಲ್ಲಿ ಬಹಳ ಚೆನ್ನಾಗಿ ಬಣ್ಣವನ್ನು ಲೇಪಿಸಿಕೊಳ್ಳುತ್ತಾರೆ. ಕೆಲವರು ಲೇಪಿಸಿಕೊಳ್ಳುವುದಿಲ್ಲ. ಬಹಳ ಪರಿಶ್ರಮ ಪಡಬೇಕಾಗಿದೆ. ಮೊಟ್ಟಮೊದಲು ಬೇಹದ್ದಿನ ತಂದೆಯನ್ನು ತಿಳಿದುಕೊಂಡಿದ್ದೀರಾ? ಎಂದು ಕೇಳಬೇಕೆಂದು ಮಕ್ಕಳಿಗೆ ತಿಳಿಸಲಾಗಿದೆ. ಆಗ ಅವರು ಹೌದು, ನನ್ನಲ್ಲಿಯೂ ಇದ್ದಾರೆ, ಸರ್ವವ್ಯಾಪಿ ಆಗಿದ್ದಾರೆ ಎಂದು ಹೇಳುತ್ತಾರೆ. ನಂತರ ಕೇಳುವ ಅವಶ್ಯಕತೆ ಇಲ್ಲ. ಯಾವಾಗ ತಂದೆಯೆಂದು ಹೇಳುವಿರಿ ಆ ತಂದೆಯು ನಿಮ್ಮಲ್ಲಿ ಹಾಗೂ ನಮ್ಮಲ್ಲಿ ಹೇಗಿರುತ್ತಾರೆ? ತಂದೆಯಿಂದಂತೂ ಆಸ್ತಿಯನ್ನು ತೆಗೆದುಕೊಳ್ಳಲಾಗುತ್ತದೆ ಅದಕ್ಕಾಗಿ ಮೊದಲು ತಂದೆಯ ಬಗ್ಗೆ ತಿಳಿಸಿಕೊಡಿ.

“ನನ್ನ ಅಗಲಿಹೋಗಿ ಸಿಕ್ಕಿರುವ ಮಕ್ಕಳೇ” ಎಂದು ತಂದೆ ಹೇಳುತ್ತಾರೆ. ಈ ರೀತಿ ಯಾವುದೇ ಸಾಧು-ಸನ್ಯಾಸಿಗಳು ಹೇಳಲು ಸಾಧ್ಯವಿಲ್ಲ. ಅವಶ್ಯವಾಗಿ ನಾವು ಶಿವಬಾಬಾನಿಗೆ ಅಗಲಿಹೋಗಿ ಸಿಕ್ಕಿದ ಮಕ್ಕಳಾಗಿದ್ದೇವೆ. 5000 ವರ್ಷದ ನಂತರ ಪುನಃ ಬಂದು ಸ್ವರ್ಗದ ಆಸ್ತಿಯನ್ನು ತೆಗೆದುಕೊಳ್ಳುವುದಕ್ಕೋಸ್ಕರ ಮಿಲನ ಮಾಡುತ್ತಿದ್ದೇವೆ ಎಂದು ನಿಮಗೆ ತಿಳಿದಿದೆ. ನಾವು ಸ್ವರ್ಗದ ಮಾಲೀಕರಾಗಿದ್ದೆವು ನಂತರ ನಾವೇ ಆಗುತ್ತಿದ್ದೇವೆ. ಎಂದು ನಿಮಗೆ ತಿಳಿದಿದೆ. ಸ್ವರ್ಗದಲ್ಲಿ ಅವಶ್ಯವಾಗಿ ಹೋಗಬೇಕಾಗಿದೆ. ನಂತರ ಪುರುಷಾರ್ಥದನುಸಾರ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳಬೇಕು. ಒಳ್ಳೆಯದು!

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆ-ತಾಯಿಯನ್ನು ಅನುಸರಣೆ ಮಾಡುವ ಸೇವೆಯನ್ನು ಮಾಡಬೇಕು. ಸ್ವದರ್ಶನ ಚಕ್ರಧಾರಿಗಳಾಗಬೇಕು ಮತ್ತು ಮಾಡಬೇಕು.

2. ತಂದೆಯ ಕೊರಳಿನ ಹಾರ ಆಗಲು ಬುದ್ಧಿಯಿಂದ ತಂದೆಯನ್ನು ನೆನಪು ಮಾಡಬೇಕು. ಶಬ್ದ ಮಾಡಬಾರದು. ನೆನಪಿನ ಗುಂಗಿನಲ್ಲಿರಬೇಕು.

ವರದಾನ: ದೇಹ-ಅಭಿಮಾನದ ತ್ಯಾಗದ ಮೂಲಕ ಸದಾ ಸ್ವಮಾನದಲ್ಲಿ ಸ್ಥಿತರಾಗಿರುವಂತಹ ಸಮ್ಮಾನಧಾರಿ ಭವ.

ಯಾವ ಮಕ್ಕಳು ಈ ಒಂದು ಜನ್ಮದಲ್ಲಿ ದೇಹಾಭಿಮಾನವನ್ನು ತ್ಯಾಗ ಮಾಡಿ ಸ್ವಮಾನದಲ್ಲಿ ಸ್ಥಿತರಾಗಿರುತ್ತಾರೆ, ಅವರಿಗೆ ಈ ತ್ಯಾಗಕ್ಕೆ ಬದಲಾಗಿ ಭಾಗ್ಯವಿಧಾತ ತಂದೆಯ ಮೂಲಕ ಇಡೀ ಕಲ್ಪಕ್ಕಾಗಿ ಸಮ್ಮಾನಧಾರಿಯಾಗಿರುವ ಭಾಗ್ಯ ಪ್ರಾಪ್ತಿಯಾಗಿ ಬಿಡುವುದು. ಅರ್ಧಕಲ್ಪ ಪ್ರಜೆಗಳಿಂದ ಸಮ್ಮಾನ ಪ್ರಾಪ್ತಿಯಾಗುವುದು, ಅರ್ಧ ಕಲ್ಪ ಭಕ್ತರ ಮೂಲಕ ಸಮ್ಮಾನ ಪ್ರಾಪ್ತಿ ಮಾಡಿಕೊಳ್ಳುವಿರಿ ಮತ್ತು ಈ ಸಮಯದಲ್ಲಂತು ಸ್ವಯಂ ಭಗವಂತ ತಾವು ಸ್ವಮಾನಧಾರಿ ಮಕ್ಕಳಿಗೆ ಸಮ್ಮಾನ ಕೊಡುವರು. ಸ್ವಮಾನ ಮತ್ತು ಸಮ್ಮಾನ ಎರಡಕ್ಕೂ ಪರಸ್ಪರ ಬಹಳ ಆಳವಾದ ಸಂಬಂಧವಿದೆ.

ಸ್ಲೋಗನ್: ಪ್ರತಿ ಹೆಜ್ಜೆಯಲ್ಲಿ ತಂದೆಯ, ಬ್ರಾಹ್ಮಣ ಪರಿವಾರದ ಆಶೀರ್ವಾದ ಪಡೆಯುತ್ತಿರಿ ಆಗ ಸದಾ ಮುಂದುವರೆಯುತ್ತಿರುವಿರಿ.